## ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ಕಾರ್ಯಾಲಯ, ಗುಬ್ಬಿ

| | |
|---|---|
| | ಸತ್ಯ ಪ್ರತಿಜ್ಞೆಯ ಮೇರೆಗೆ ದಿನಾಂಕ 04.04.2026 |

**ಪಾಟೀ ಸವಾಲುಃ ಆರೋಪಿಗಳ ಪರ ವಕೀಲರಾದ**
**ಶ್ರೀ ಕೆ ಸಿ ಎನ್ ರವರಿಂದಃ**

ನೀವು 2016 ರಲ್ಲಿ ಪೇದೆಯಾಗಿದ್ದೀರಿ ಎಂದರೆ ಸರಿ. ನ್ಯಾಯಾಲಯವು FIR ಮತ್ತು ಕಡತವನ್ನು ವರ್ಗಾವಣೆ ಮಾಡುವಂತೆ ಗುಬ್ಬಿ ಪೋಲೀಸ್ ಠಾಣೆಯ ಪಿ ಎಸ್ ಐ ರವರಿಗೆ ನಿರ್ದೇಶನ ನೀಡಿತ್ತು ಎಂದರೆ ಸರಿ. ನ್ಯಾಯಾಲಯವು ಪಿ ಎಸ್ ಐ ರವರಿಗೆ ಕಡತವನ್ನು ವರ್ಗಾವಣೆ ನೀಡುವಂತೆ ಆದೇಶ ಮಾಡಿದ್ದರಿಂದ ನೀವು ಪೇದೆಯಾಗಿದ್ದರಿಂದ ಕಡತವನ್ನು ತೆಗೆದುಕೊಂಡು ಹೋಗಲು ನಿಮಗೆ ಯಾವುದೇ ಅಧಿಕಾರ ಇರಲಿಲ್ಲ ಎಂದರೆ ಸಾಕ್ಷಿಯು ನನ್ನ ಮೇಲಾಧಿಕಾರಿಗಳು ಹೇಳಿದ್ದರಿಂದ ತೆಗೆದುಕೊಂಡು ಹೋಗಿದ್ದೆನು ಎಂದು ನುಡಿಯುತ್ತಾರೆ. ನೀವು ಠಾಣಾ ವ್ಯಾಪ್ತಿಯನ್ನು ಬಿಟ್ಟು ಹೊರಗೆ ಹೋಗುವುದಾದರೆ ಠಾಣಾ ದಿನಚರಿಯಲ್ಲಿ ಮತ್ತು ಕಚ್ಚಾ ಪುಸ್ತಕದಲ್ಲಿ ನಮೂದಿಸಿ ಹೋಗಬೇಕು ಎಂದರೆ ಸರಿ. ನೀವು ಠಾಣಾ ದಿನಚರಿಯಲ್ಲಿ ಮತ್ತು ಕಚ್ಚಾ ಪುಸ್ತಕದಲ್ಲಿ ನಮೂದಿಸಿರುವ ಬಗ್ಗೆ ಚೇಳೂರು ಪೋಲೀಸ್ ಠಾಣೆಗೆ ನೀಡಿದ್ದೀರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. Oxygen cylinder ಸುಮಾರು 4-5 ಅಡಿ ಇರುತ್ತದೆ ಎಂದರೆ ಸರಿ. ಸದರಿ cylinder ಸುಮಾರು 70-80 ಕೆ ಜಿ ತೂಕ ಬರುತ್ತದೆ ಎಂದರೆ ಸಾಕ್ಷಿಯು 60 ಕೆ ಜಿ ಬರಬಹುದು ಎಂದು ನುಡಿಯುತ್ತಾರೆ. ಮು.ಮ.6 ರಿಂದ 8 ಅನ್ನು ಒಬ್ಬರೆ ತೆಗೆದುಕೊಂಡು ಹೋಗಲು ಆಗುವುದಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ಆಟೋದಲ್ಲಿ ಹಾಕಿ ಕೊಟ್ಟಿದ್ದರು ತೆಗೆದುಕೊಂಡು ಹೋಗಿದ್ದೆ ಎಂದು ನುಡಿಯುತ್ತಾರೆ. ಠಾಣೆಯಿಂದ ಯಾರೆಲ್ಲಾ ಹೋಗಿದ್ದೀರಿ ಎಂದರೆ ನಾನು ಒಬ್ಬನೇ ಎಂದು ನುಡಿಯುತ್ತಾರೆ. ನೀವು ಕಡತವನ್ನು ಚೇಳೂರು ಪೋಲೀಸ್

ಠಾಣೆಗೆ ನೀಡಿದ ನಂತರ ಏನಾದರೂ ಮಹಜರ್ ಮಾಡಿದ್ದಾರಾ ಅಥವಾ ಪೊಟೋ ತೆಗೆದಿದ್ದಾರಾ ಅಥವಾ ನಿಮ್ಮಿಂದ ವರದಿ ಪಡೆದಿದ್ದಾರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ದಿಃ 12.04.2016 ರಂದು ನೀವು ಯಾವುದೇ ಕಡತ ಮತ್ತು ಮುದ್ದೆಮಾಲನ್ನು ಚೇಳೂರು ಪೋಲೀಸ್ ಠಾಣೆಗೆ ತೆಗೆದುಕೊಂಡು ಹೋಗಿ ನೀಡಿಲ್ಲ ಎಂದರೆ ಸರಿಯಲ್ಲ. ನೀವು ಒಂದು ವೇಳೆ ಆ ರೀತಿ ನೀಡಿದ್ದರೇ ಚೇಳೂರು ಪೋಲೀಸರು ದಾಖಲಾತಿ ಮಾಡಿಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ. ನೀವು ತೆಗೆದುಕೊಂಡು ಹೋಗಿದ್ದೀರಿ ಎಂದು ಹೇಳಿದ ಆಟೋದ ಚಾಲಕರಿಂದ ಏನಾದರೂ ವರದಿ ತೆಗೆದುಕೊಂಡಿದ್ದಾರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ನೀವು ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷ್ಯನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)

ಓ . ಹೇ. ಕೇ. ಸರಿ. ಇದೆ

**ಪ್ರ.ದ. ನ್ಯಾ ದಂ. ಗುಬ್ಬಿ**

A1 and A16 absent. EP filed. Perused. Allowed.
A2 to 9,A11 and A13 and A15 present.
.C.w1 present. He is examined as P.W.1 and got marked Ex.P.1to Ex.P.13.
L/C for accused prays time for cross examining PW1. Prayer allowed on cost of Rs.300/-.
For cross of PW1.
Call on.21.03.2024.

Prl.C.J and JMFC, Gubbi.

4. ಸಾಕ್ಷಿಗೆ ಈಗ ಒಂದು ದಾಖಲೆಯನ್ನು ತೋರಿಸಲಾಗಿದ್ದು ಅದು ಪ್ರ.ವ.ವ ಆಗಿದ್ದು ಅದನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿ.ಪಿ.8 ಎಂದು ಗುರುತಿಸಲಾಯಿತು. ಸಾಕ್ಷಿಯು ತನ್ನ ಸಹಿಯನ್ನು ನೋಡಿ ಗುರುತಿಸಿರುತ್ತಾರೆ ಸದರಿ ಸಹಿಯನ್ನು ನಿ.ಪಿ.8(ಎ)ಎಂದು ಗುರುತಿಸಲಾಯಿತು.

5. ಸಾಕ್ಷಿಗೆ ಈಗ ಒಂದು ದಾಖಲೆಯನ್ನು ತೋರಿಸಲಾಗಿದ್ದು ಅದು ಸ್ಥಳ ಪಂಚನಾಮೆ ಆಗಿದ್ದು ಅದನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿ.ಪಿ.2 ಎಂದು ಗುರುತಿಸಲಾಗಿದೆ. ಸಾಕ್ಷಿಯು ತನ್ನ ಸಹಿಯನ್ನು ನೋಡಿ ಗುರುತಿಸಿರುತ್ತಾರೆ ಸದರಿ ಸಹಿಯನ್ನು ನಿ.ಪಿ.2(ಡಿ)ಎಂದು ಗುರುತಿಸಲಾಯಿತು.

**ಸಿ.ಸಿ.177/2016** **5** **ಪಿ.**ಡಬ್ಲುಃ **10**

**ಸಿ.ಡಬ್ಲುಃ 14**

6. ಸಾಕ್ಷಿಗೆ ಈಗ ಒಂದು ದಾಖಲೆಯನ್ನು ತೋರಿಸಲಾಗಿದ್ದು ಅದು ಚಾಸಾ 1 ರವರ ಗಾಯದ ಪ್ರಮಾಣಪತ್ರ ಆಗಿದ್ದು ಅದನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿ.ಪಿ.7 ಎಂದು ಗುರುತಿಸಲಾಗಿದೆ. ಸಾಕ್ಷಿಯು ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಸದರಿ ಸಹಿಯನ್ನು ನಿ.ಪಿ.7(ಬಿ)ಎಂದು ಗುರುತಿಸಲಾಯಿತು.

**ಸಿ.ಸಿ.398/2017** **3** **ಪಿ.**ಡಬ್ಲುಃ

**07**

**ಸಿ.ಡಬ್ಲು 07**

7. ನ್ಯಾಯಾಲಯದ ಮುಂದಿರುವ 1 ಕಬ್ಬಿಣದ ಸುಮಾರು 1 ಅಡಿ ಉದ್ದದ 1/4 X1/4 ದಪ್ಪದ ಉಳಿಯನ್ನು , ರಕ್ತದ ಕಲೆಯಾಗಿದ್ದ ಹಸಿರುಬಣ್ಣ ದ ರವಿಕೆಯನ್ನು , ಒಂದು ಕಡು ನೀಲಿ ಬಣ್ಣದ ಚುಕ್ಕೆ ಇರುವ ಬಾರ್ಡರ್ ಇರುವ ಸೀರೆಯನ್ನು ಹಾಗೂ ಒಂದು ಒಳಹಿಡಿ ಗಾತ್ರದ 2.3/4 ಮುಕ್ಕಾಲು ಅಡಿ ಉದ್ದದ ದೊಣ್ಣೆಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅವುಗಳನ್ನು ಕ್ರಮವಾಗಿ ಮುಮಾ.1 ರಿಂದ ಮು.ಮಾ.4 ಎಂದು ಗುರುತಿಸಲಾಯಿತು. ನ್ಯಾಯಾಲಯದ ಮುಂದಿರುವ ಆರೋಪಿಗಳನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ.

**<u>ಪಾಟೀಸವಾಲು ಆರೋಪಿಪರ ವಕೀಲರಾದ ಶ್ರೀ.ಎಸ್.ಎನ್.ಹೆಚ್.ರವರಿಂದ ಃ–</u>**

ಘಟನೆ ನಡೆದ ದಿನಾಂಕ–30–06–2017 ಆಗಿರುತ್ತದೆ. ಚಾಸಾ 1 ದಿಃ03–07–2017 ರಂದು ದೂರು ನೀಡಿರುತ್ತಾರೆ. ಚಾಸಾ –1 ಆರೋಪಿಗಳ ವಿರುದ್ದ ಸುಳ್ಳು ದೂರು ನೀಡಿದ್ದಾರೆ ಎಂದರೆ ಸರಿಯಲ್ಲ. ನಾನು ಘಟನಾ ಸ್ಥಳಕ್ಕೆ ಹೋಗಿಲ್ಲ , ಅಲ್ಲಿ ಸ್ಥಳ ಮಹಜರ್ ಮಾಡಿಲ್ಲ ಎಂದರೆ ಸರಿಯಲ್ಲ. ಘಟನಾ ಸ್ಥಳದ ಚಕ್ಕುಬಂದಿ ನನಗೆ ಗೊತ್ತು. ನಿ.ಪಿ.2

ಸಿ.ಸಿ.177/2016 6 ಪಿ.ಡಬ್ಲುಃ 10

**ಸಿ.ಡಬ್ಲುಃ 14**

ರಲ್ಲಿ ನಮೂದಿಸಿರುವ ಚಕ್ಕುಬಂದಿ ತಪ್ಪಾಗಿರುತ್ತದೆ ಎಂದರೆ ಸರಿಯಲ್ಲ. ಚಾಸಾ 1, 2 ,3 ಹಾಗೂ ಆರೋಪಿಗಳು ರಕ್ತಸಂಬಂದಿಕರು ಎಂದರೆ ಸರಿ. ಜಮೀನಿನ ವಿವಾದದ ದ್ವೇಷದಿಂದ ಚಾಸಾ 1 ಆರೋಪಿಗಳ ವಿರುದ್ದ ಸುಳ್ಳು ದೂರು ನೀಡಿದ್ದಾರೆ ಎಂದರೆ ಸರಿಯಲ್ಲ. ಚಾಸಾ 1 ಆರೋಪಿಗಳ ವಿರುದ್ದ ಹಲವು ಸುಳ್ಳು ದೂರುಗಳನ್ನು ನೀಡಿ ಸುಳ್ಳು ಪ್ರಕರಣ ದಾಖಲಿಸಿದ್ದಾರೆ ಎಂದರೆ ಸರಿಯಲ್ಲ. ಮು.ಮಾ1 ರಿಂದ 4 ಅಮಾನತ್ತುಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಮು.ಮಾ1 ರಿಂದ 4 ಕ್ಕೂ ಆರೋಪಿಗಳಿಗೂ ಯಾವುದೇ ಸಂಬಂದ ಇಲ್ಲ ಎಂದರೆ ಸರಿಯಲ್ಲ. ಮು. ಮಾ1 ರಿಂದ 4 ಅನ್ನು ಈ ಪ್ರಕರಣಕ್ಕಾಗಿ ಸೃಷ್ಟಿಮಾಡಿದ್ದೇನೆ ಎಂದರೆ ಸರಿಯಲ್ಲ. ನಿ.ಪಿ.2 ಮತ್ತು ನಿ.ಪಿ.3 ಅನ್ನು ನಾನು ಠಾಣೆಯಲ್ಲಿ ಕೂತು ತಯಾರು ಮಾಡಿದ್ದೇನೆ ಎಂದರೆ ಸರಿಯಲ್ಲ. ನಿ.ಪಿ.7 ಸುಳ್ಳು ಗಾಯದ ಪ್ರಮಾಣಪತ್ರ ಆಗಿರುತ್ತದೆ ಎಂದರೆ ಸರಿಯಲ್ಲ ಚಾಸಾ 1 ರವರೇ ಆರೋಪಿಗಳ ಮೇಲೆ ಗಲಾಟೆ ಮಾಡಿ ಅದರಿಂದ ತಪ್ಪಿಸಿಕೊಳ್ಳಲು ಆರೋಪಿಗಳ ವಿರುದ್ದ ಸುಳ್ಳು ದೂರು ನೀಡಿರುತ್ತಾರೆ ಎಂದರೆ ಸರಿಯಲ್ಲ.

ಸಿ.ಸಿ.398/2017 4 ಪಿ.ಡಬ್ಲುಃ 07

**ಸಿ.ಡಬ್ಲು 07**

ಚಾಸಾ 1 ರವರು ಆರೋಪಿಗಳ ವಿರುದ್ದ ಗಲಾಟೆ ಮಾಡಿದ್ದು ಆಗ ನಾನು ಇಬ್ಬರನ್ನು ಠಾಣೆಗೆ ಕರೆಸಿಕೊಂಡು ರಾಜಿ ಮಾಡಿದ್ದೆ ಎಂದರೆ ಸರಿಯಲ್ಲ. ಚಾಸಾ 1 ರವರ ಒತ್ತಡಕ್ಕೆ ಮಣಿದು ನಾನು ಆರೋಪಿಗಳ ವಿರುದ್ದ ಈ ಸುಳ್ಳು ಪ್ರಕರಣ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ನಾನು ಸರಿಯಾಗಿ ತನಿಖೆ ಮಾಡದೇ ಆರೋಪಿಗಳ ವಿರುದ್ದ ಸುಳ್ಳು ದೋಷಾರೋಪಣಾ ಪಟ್ಟಿಯನ್ನು

ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ನಿ.ಪಿ.2 ಕ್ಕೆ ಸಾಕ್ಷಿಗಳ ಸಹಿಯನ್ನು ನಾನು ಠಾಣೆಯಲ್ಲೇ ಪಡೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಘಟನಾ ಸ್ಥಳದಲ್ಲಿ ಸ್ಥಳೀಕರನ್ನು ನಾನು ನಿ.ಪಿ.2 ಕ್ಕೆ ನಾನು ಪಂಚರನ್ನಾಗಿ ಮಾಡಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ**.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)

ಓ . ಹೇ. ಕೇ. ಸರಿ. ಇದೆ

**ಪ್ರ.ದ. ನ್ಯಾ ದಂ. ಗುಬ್ಬಿ**

ಸಿ.ಡಬ್ಲುಃ 14